# ಕತ್ತಿಯಂಚಿನ ದಾರಿಯಲ್ಲಿ ಎದೆಯ ಹಣತೆಯ ಬಾನು

## ಬಾನು ಮುಷ್ತಾಕ್ ಕಥೆ-ವ್ಯಕ್ತಿತ್ವ: ಒಡನಾಟದ ಆಪ್ತ ನೆನಪುಗಳು



**ಭಾರತಿ ದೇವಿ ಪಿ.**

ಬಾನು ಮುಷ್ತಾಕ್ ಅವರ ಪಯಣ ಆಸಕ್ತಿದಾಯಕವಾದದ್ದು. ದೀಪಾ ಭಾಸ್ತಿಯವರು ಅನುವಾದಿಸಿದ ಬಾನು ಅವರ ಕಥಾ ಸಂಕಲನ 'ಹಾರ್ಟ್ ಲ್ಯಾಂಪ್'ಗೆ ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ ಬಂದಿರುವುದು ನಮ್ಮೆಲ್ಲರಲ್ಲಿ ಸಂಭ್ರಮ ಮೂಡಿಸಿದೆ. ಈ ಹಿನ್ನೆಲೆಯಲ್ಲಿ ಬಾನು ಅವರ ಬದುಕನ್ನು ಗಮನಿಸಿದಾಗ ಅವರು ಬರಹಗಾರ್ತಿಯಾಗಿ ಮತ್ತು ನಮ್ಮ ಕಾಲದ ಸಾಕ್ಷಿಪ್ರಜ್ಞೆಯಾಗಿ ಕಾಣುತ್ತಾರೆ. ಬರಹಗಾರ್ತಿಯಾಗಿ ಅವರು ಅನೇಕ ಸವಾಲು, ಅಗ್ನಿದಿವ್ಯಗಳನ್ನು ದಾಟಿ ಬಂದವರು. ಜೊತೆಗೆ ಅವರು ಲೇಖಕಿಯಾಗಿ ಸಾಮಾಜಿಕ ಬದಲಾವಣೆಯ ಚಾಲಕ ಶಕ್ತಿಯಾಗಿ ಸಂಘಟನೆಗಳ ಜೊತೆ ಒಗ್ಗೂಡಿ ಕೆಲಸ ಮಾಡಿದ ಬಗೆಯೂ ನನಗೆ ಅಷ್ಟೇ ಮುಖ್ಯ ಎನಿಸುತ್ತದೆ. ಅವರೊಳಗಿನ ಶಕ್ತಿ ನಮ್ಮೆಲ್ಲರನ್ನೂ ಹುರಿದುಂಬಿಸುವಂಥದ್ದು, ಕ್ರಿಯೆಗೆ ಹಚ್ಚುವಂಥದ್ದು. ಇಂತಹ ವ್ಯಕ್ತಿತ್ವದ ಬಗ್ಗೆ ಬುಕರ್ ಹೊರತಾಗಿಯೂ ಚರ್ಚೆ ನಡೆಯಬೇಕಾಗಿತ್ತು ಹೌದಾದರೂ, ಬುಕರ್ ನೆಪದಲ್ಲಾದರೂ ಚರ್ಚೆ ನಡೆಯುತ್ತಿರುವುದು ಸಂತೋಷದ ಸಂಗತಿ.

ಸಾಮಾನ್ಯ ಕುಟುಂಬದ ಮುಸ್ಲಿಂ ಹೆಣ್ಣುಮಗಳು ವಿದ್ಯಾವಂತಳಾಗಿ ತನ್ನತನವನ್ನು ಕಳೆದುಕೊಳ್ಳದೆ ಬದುಕು ಕಟ್ಟಿಕೊಳ್ಳಲು ನಡೆಸಿದ ಹೋರಾಟ ಸಣ್ಣದೇನಲ್ಲ. ನಾಲ್ಕು ಗೋಡೆಗಳ ಮಧ್ಯೆ ಬಂಧಿಯಾಗಿರಲು ಒಲ್ಲದ ಅವರು ಶಿಕ್ಷಕಿಯಾಗಿ, ದರ್ಜಿಯಾಗಿ, ಪತ್ರಕರ್ತೆಯಾಗಿ ಕೊನೆಗೆ ನ್ಯಾಯವಾದಿಯಾಗಿ ಕೆಲಸ ಮಾಡಿರುವವರು. ಈ ಮೂಲಕ ಸುತ್ತಲಿನ ಆಗುಹೋಗುಗಳಿಗೆ ತೆರೆದುಕೊಂಡವರು. ಹಾಸನದಲ್ಲಿ ಅವರು ನೆಲೆಸಿರುವ ಪ್ರದೇಶವೂ ತುಂಬಾ ಬಡ ಮತ್ತು ಕೆಳಮಧ್ಯಮ ಮುಸ್ಲಿಂ ಕುಟುಂಬಗಳು ವಾಸಿಸುವ ಜಾಗ. ಆ ಕುಟುಂಬಗಳ ನೋವು, ದುಃಖ, ತಲ್ಲಣಗಳನ್ನು ಬಾನು ಅವರು ಹತ್ತಿರದಿಂದ ಬಲ್ಲರು. ಅದರಿಂದಾಗಿಯೇ ದನಿ ಇರದವರಿಗೆ ದನಿಯಾಗಿ ಇವರ ಬಹುತೇಕ ಬರಹಗಳು ಮೂಡಿವೆ.

ಮಹಿಳಾವಾದಕ್ಕೆ ಸಂಬಂಧಿಸಿ ನಾವು ಮತ್ತೆ ಮತ್ತೆ ಬಳಸುವ 'ಪರ್ಸನಲ್ ಈಸ್ ಪೊಲಿಟಿಕಲ್' ಎಂಬ ಮಾತು ಎಲ್ಲರ ವಿಚಾರದಲ್ಲೂ ಅನ್ವಯಿಸಿ ನೋಡಬಹುದಾದದ್ದು. ತನ್ನ ದನಿ ಹೊರಹಾಕದೇ ಇರಲಾರೆ ಎಂಬ ತುಡಿತ ಇನ್ನೊಂದೆಡೆಯಲ್ಲಿ ದನಿ ಇರದವರಿಗೆ ದನಿಯಾಗಿ ಹೊರಬಂದದ್ದು